O.S. 164/2015
D.W.3

**<u>ಸಾಕ್ಷಿಯನ್ನು ದಿನಾಂಕಃ 26-09-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ವಕೀಲರವರಿಂದಃ</u>**

ಈ ದಾವೆಯನ್ನು ರೇಣುಕಮ್ಮರವರು ಬಸಮ್ಮನ ಮೇಲೆ ದಾಖಲು ಮಾಡಿರುವರು. ನಾನು 9 ನೇ ತರಗತಿ ಕಲಿತಿದ್ದೇನೆ. ನನ್ನ ಹೊಲದ ಸರ್ವೇ ನಂ. 78 ಇರುವುದು. ಅದು 3 ಎಕರೆ ಇರುವುದು. ನನ್ನ ಹೊಲದ ವಿವರಗಳನ್ನು ಮುಖ್ಯವಿಚಾರಣೆಯಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ನನ್ನ ಹೊಲ ಇರುವುದಿಲ್ಲ ಎಂದರೆ ಸರಿ. ಬಸಮ್ಮ ಹಾಗೂ ಆಕೆಯ ಮಕ್ಕಳು ನನ್ನ ವಿಶ್ವಾಸಿಕರು ಎಂದರೆ ಸರಿ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರಕ್ಕೆ ಬಸಮ್ಮ ಮಾಹಿತಿಯನ್ನು ನೀಡಿರುವಳು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರು ಮಾಡಲು ಯಾರೂ ಮಾಹಿತಿಯನ್ನು ನೀಡಿರುವುದಿಲ್ಲ. ದಾವಾ ಆಸ್ತಿಯು ವಾದಿಯ ಸ್ವಾಧೀನ ಅನುಬೋಗದಲ್ಲಿರುವುದು ಎಂದರೆ ಸರಿ. ವಾದಿಗೆ ತೊಂದರೆ ಕೊಡಲು ಹಾಗೂ ಬಸಮ್ಮಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

26.09.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**